ನಂಬಿಕೆಯು ನಮ್ಮ ಬದುಕನ್ನು ನಿಜವಾಗಿಯೂ ಜಡವಾಗಿಸುತ್ತದೆ. ಊಟ, ತಿಂಡಿ, ನಿದ್ರೆ, ಮದುವೆ ಹೀಗೆ ಸಿದ್ಧಸೂತ್ರಗಳಿಗೆ ನಮ್ಮನ್ನು ಕಟ್ಟಿಹಾಕಿಬಿಡುತ್ತದೆ. ಮರಣದ ಶಿಕ್ಷೆಗೊಳಗಾದ ಕೈದಿಗಳ ಸಂಗತಿಯನ್ನು ಬಿಡಿ, ಹೊರಪ್ರಪಂಚದಲ್ಲಿ ಮುಕ್ತವಾಗಿ ಜೀವಿಸುವ ಮನುಷ್ಯರಿಗೆ ತಮ್ಮ ಜೀವನದ ಕೊನೆ ಯಾವಾಗೆಂದು ತಿಳಿದುಬಿಟ್ಟರೆ ಅವನ ಬದುಕಿನ ರೀತಿಯೇ ಬದಲಾಗಿಬಿಡುತ್ತದೆ. ಬದುಕಿನ ಪ್ರತಿಕ್ಷಣಗಳನ್ನು ಅವರು ಜೀವಿಸುತ್ತಾರೆ ಮತ್ತು ಬದುಕಿನ ಮೌಲ್ಯಗಳ ಬಗ್ಗೆ ಕಾಳಜಿವಹಿಸುತ್ತಾರೆ. ಸಾವಿನ ನೆರಳಿನಲ್ಲಿ ಬದುಕುವವರು ತಾವು ಮಾಡುವ ಪ್ರತಿ ಕೆಲಸವನ್ನೂ ಅರ್ಥಪೂರ್ಣವಾಗಿಸುತ್ತಾರೆ. ಅವರು ಬದುಕಿಗೆ ಇನ್ನಷ್ಟು ಮಾಧುರ್ಯವನ್ನು ತುಂಬಿಕೊಳ್ಳುತ್ತಾರೆ. ಹಾಗಾದರೆ ಪ್ರತಿದಿನವನ್ನೂ ಇದೇ ನನ್ನ ಜೀವನದ ಕೊನೆಯ ದಿನ, ಇದೇ ನನ್ನ ಜೀವನದ ಕಡೆಯ ಗಳಿಗೆಯೆಂಬಂತೆ ಬದುಕಿದರೆ ನಿಜಕ್ಕೂ ಬದುಕು ಆಸಕ್ತಿದಾಯಕ ಆಗಿರುತ್ತದೆಯಲ್ಲವೆ? ಸಾವು ನಮ್ಮಿಂದ ಬಹಳ ದೂರದಲ್ಲಿದೆ ಎಂದೇ ನಾವು ಭಾವಿಸುತ್ತೇವೆ.

ಇದೇ ವಿಷಯವನ್ನು ನಾವು ನಮ್ಮ ಪಂಚೇಂದ್ರಿಯಗಳಿಗೂ ಅನ್ವಯಿಸಬಹುದು ಎನಿಸುತ್ತದೆ. ನಮಗೆ ದೃಷ್ಟಿ ಸರಿಯಾಗಿರುವವರೆಗೂ ಕಣ್ಣುಗಳ ಮಹತ್ವ ಅರಿವಾಗುವುದಿಲ್ಲ, ಕಿವಿ ಸರಿಯಾಗಿ ಕೇಳಿಸುವವರೆಗೂ ಶ್ರವಣ ಸಾಮರ್ಥ್ಯದ ಕೊಡುಗೆ ತಿಳಿಯುವುದಿಲ್ಲ, ರೋಗ ಬರುವವರೆಗೂ ಆರೋಗ್ಯವಾಗಿರುವ ಸುಖದ ಬಗ್ಗೆ ಯೋಚಿಸುವುದಿಲ್ಲ. ನಮ್ಮ ಸುತ್ತಲಿನ ಜಗತ್ತನ್ನು ಸೂಕ್ಷ್ಮವಾಗಿ ನೋಡುವ ಅತ್ಯದ್ಭುತವಾದ ಇಂದ್ರಿಯಗಳು ನಮ್ಮಲ್ಲಿದ್ದೂ, ಅದನ್ನು ಪರಿಣಾಮಕಾರಿಯಾಗಿ ಬಳಸುವ ಬಗ್ಗೆ ಚಿಂತಿಸುವುದಿಲ್ಲ. ಅದಕ್ಕೇ ಹಿರಿಯರು ಗಾದೆ ಮಾಡಿದ್ದು, 'ಕಳೆದುಕೊಳ್ಳದೇ ಯಾವುದೇ ವಸ್ತುವಿನ ಮಹತ್ವ ನಮಗೆ ಅರಿವಾಗುವುದಿಲ್ಲ.' ನನಗನಿಸುತ್ತದೆ, ಪ್ರತಿಯೊಬ್ಬ ವ್ಯಕ್ತಿಯೂ ಅವನ ಜೀವನದ ಶೈಶವಾವಸ್ಥೆಯಲ್ಲಿ ಸ್ವಲ್ಪ ದಿನಗಳ ಮಟ್ಟಿಗಾದರೂ ಕುರುಡು ಮತ್ತು ಕಿವುಡರಾಗಬೇಕು. ಕತ್ತಲಾದಾಗ ಬೆಳಕಿನ ಮಹತ್ವ ಅರಿವಾದಂತೆ, ಮೌನವಾದಾಗ ಮಾತಿನ ಪ್ರಾಮುಖ್ಯತೆ ತಿಳಿವಂತೆ ಅವರಿಗೆ ತಾವು ಹೊಂದಿರುವ ಅತ್ಯಮೂಲ್ಯ ಅಂಗಗಳ ಬೆಲೆ ತಿಳಿಯುತ್ತದೆ.

ಜಗತ್ತನ್ನು ನೋಡಬಲ್ಲ ನನ್ನ ಸ್ನೇಹಿತರು ಏನೆಲ್ಲವನ್ನು ನೋಡುತ್ತಾರೆ ಎಂಬ ಬಗ್ಗೆ ನನಗೆ ಬಹಳ ಆಸಕ್ತಿ. ಮೊನ್ನೆಯಷ್ಟೇ ಆಗ ತಾನೇ ಹಸಿರು ತುಂಬಿದ ಹಾದಿಯಲ್ಲಿ ವಾಯುಸಂಚಾರವನ್ನು ಮುಗಿಸಿಕೊಂಡು ಬಂದ ನನ್ನ ಸ್ನೇಹಿತೆಯೊಂದಿಗೆ ಏನೆಲ್ಲವನ್ನು ನೋಡಿದೆ? ಎಂದು ಕೇಳಿದೆ. ವಿಶೇಷವಾದುದನ್ನೇನೂ ನೋಡಿಲ್ಲ ಎಂದಳು. ಅವಳ ಮಾತಿನಿಂದ ನನಗೆ ಅಷ್ಟೇನೂ ಆಶ್ಚರ್ಯವಾಗಲಿಲ್ಲ. ಯಾಕೆಂದರೆ ದೃಷ್ಟಿಯಿದ್ದವರು ಹೆಚ್ಚೇನನ್ನೂ ನೋಡುತ್ತಿಲ್ಲವೆಂದು ನನಗೆ ನನ್ನ ಹಿಂದಿನ ಅನುಭವಗಳು ಕಲಿಸಿದ್ದವು.

ಆದರೂ ನಾನು ಯೋಚಿಸುತ್ತೇನೆ, ಗಿಡಮರಗಳಿಂದ ಕೂಡಿದ ದಾರಿಯಲ್ಲಿ ತಾಸುಗಟ್ಟಲೆ ನಡೆಯುವಾಗಲೂ ವಿಶೇಷವಾದುದನ್ನೇನೂ ಕಾಣದಿರಲು ಹೇಗೆ ಸಾಧ್ಯ? ಕೇವಲ ಸ್ಪರ್ಶವನ್ನು ಮಾತ್ರವೇ ಗ್ರಹಿಸಬಲ್ಲ ನಾನು ಹೀಗೆ ಸಾಗುವಾಗಲೆಲ್ಲ ನೂರಾರು ಸೋಜಿಗದ ಸಂಗತಿಗಳನ್ನು ಗ್ರಹಿಸುತ್ತೇನೆ. ಎಲೆಗಳ ಮೇಲೆ ಕೈಸವರುತ್ತಾ ಅವುಗಳ ಜೋಡಣೆಯನ್ನು ನೋಡಿ ಅಚ್ಚರಿಪಡುತ್ತೇನೆ. ಚಿಗುರಿನ ಮೃದುತ್ವ ಮತ್ತು ಕಾಂಡಗಳ ದೊರಗನ್ನು ಸವರುತ್ತೇನೆ. ಪುಟ್ಟ ಗಿಡಗಳನ್ನೆಲ್ಲ ತಡವುತ್ತಾ ಅವುಗಳ ಮೊಗ್ಗುಗಳಿಗಾಗಿ ಅರಸುತ್ತೇನೆ. ಶಿಶಿರದ ನಿದ್ದೆಯಲ್ಲಿರುವ ಗಿಡಮರಗಳೆಲ್ಲಾ ವಸಂತದ ಆಗಮನಕ್ಕೆ ಎಚ್ಚೆತ್ತಿರುವ ಸಂಕೇತಗಳಂತೆ ಅವು ನನಗೆ ಭಾಸವಾಗುತ್ತವೆ. ಚಿಕ್ಕ ಮರಗಳ ಕಾಂಡಗಳಿಗೆ ಆತುಕೊಂಡು ಕೆಲವೊಮ್ಮೆ ಹಕ್ಕಿಗಳ ಹಾಡಿನ ಕಂಪನವನ್ನು ಅನುಭವಿಸುತ್ತೇನೆ. ಹೂಗಳ ಮೃದುತ್ವ ನನ್ನನ್ನು ಚಕಿತಗೊಳಿಸುತ್ತದೆ. ಪ್ರಕೃತಿಯ ಅತ್ಯಂತ ಸುಂದರ ಕಲಾಕೃತಿಯಂತೆ ಅವು ಭಾಸವಾಗುತ್ತವೆ. ಸುರಿಯುವ ನೀರಿನ ಧಾರೆಯಲ್ಲಿ ಬೆರಳುಗಳನ್ನು ಚಾಚಿ ತಣ್ಣನೆಯ ಆಹ್ಲಾದವನ್ನು ಪಡೆಯುವುದು ನನಗೆ ಹಿತವೆನಿಸುತ್ತದೆ. ಅದೆಷ್ಟೋ ದುಬಾರಿಯಾದ ಹೊದಿಕೆಗಿಂತ ನೆಲದ ತುಂಬಾ ಹಾಸಿರುವ ಹುಲ್ಲಹಾಸು ಅಮೂಲ್ಯವೆನಿಸುತ್ತದೆ. ಇವೆಲ್ಲದರ ನಡುವೆ ಹಾದು ಬರುವಾಗ ನೋಡುವ ಕಣ್ಣು ಮತ್ತು ಕೇಳುವ ಕಿವಿಗಳಿರುವ ನನ್ನ ಸ್ನೇಹಿತರಿಗೆ ವಿಶೇಷವಾದುದೇನೂ ಕಾಣದಿರುವುದು ಆಶ್ಚರ್ಯವಲ್ಲವೆ?

ಪ್ರಕೃತಿಯ ಮಡಿಲಿನಲ್ಲಿ ಓಡಾಡುವಾಗಲೆಲ್ಲ